
‘ಮಗಳೇ! ಸಾಮಾಜಿಕ ಪ್ರತಿಷ್ಠೆಯೂ ಮಹತ್ವದ ಸಂಗತಿಯಾಗಿದೆ, ಕಡೇಪಕ್ಷ ನೀನಾದರು ಯೋಚಿಸಬೇಕು’, ಮಗನಿಗೆ ತಿಳಿ ಹೇಳುವಲ್ಲಿ ವಿಫಲರಾದ ರಿತಿಕ್‌ರ ತಂದೆ, ಮತ್ತೊಮ್ಮೆ ನನಗೆ ತಿಳಿ ಹೇಳುವ ಪ್ರಯತ್ನ ಮಾಡಿದರು. ಆದರೆ ಅವರು ತಪ್ಪು ತರ್ಕವನ್ನು ಆಯ್ಕೆ ಮಾಡಿದ್ದರು. ಆ ತರ್ಕ ನನ್ನ ಭಾವನೆಗಳನ್ನು ಇನ್ನಷ್ಟು ಹೆಚ್ಚು ವಿದ್ರೋಹಿಯಾಗಿಸಲು ಸಾಕಷ್ಟಾಗಿತ್ತು.

‘ನೋಡಿ, ನೀವು ಯಾವ ಸಾಮಾಜಿಕ ಪ್ರತಿಷ್ಠೆಯ ಬಗ್ಗೆ ಹೇಳುತ್ತಿದ್ದೀರೋ, ಅದು ನವವಧುವನ್ನು ಸುಟ್ಟು ಸಾಯಿಸಿದಾಗ ಎಲ್ಲಿಗೆ ಹೋಗುತ್ತದೆ? ಹೆಂಡತಿಯಿಂದ ಬಿಡುಗಡೆ ಪಡೆಯಲು, ಕಾರಣವಿಲ್ಲದೆ ಅವಳನ್ನು ನೀತಿಗೆಟ್ಟವಳೆಂದು ಹೇಳಿದಾಗ ಎಲ್ಲಿಗೆ ಹೋಗುತ್ತದೆ? ಅಪ್ಪಾ, ನೀವು ಯಾವ ಸಮಾಜ ಮತ್ತು ಸಾಮಾಜಿಕ ಪ್ರತಿಷ್ಠೆಯ ಕಾರಣವನ್ನು ಕೊಡುತ್ತಿದ್ದೀರೋ, ಆ ಪ್ರತಿಷ್ಠೆ ತನ್ನ ಹೆಂಡತಿಯನ್ನು ಸುಟ್ಟವನಿಗೆ ಸಿಗುತ್ತದೆ. ಹತ್ತಾರು ಪರಿವಾರಗಳು ತಮ್ಮತಮ್ಮ ಹೆಣ್ಣು ಮಕ್ಕಳೊಂದಿಗೆ ನಿಂತು, ‘ನೀನು ಒಬ್ಬಳನ್ನು ಕೊಂದೆ, ಅವಳು ಅದಕ್ಕೇ ಯೋಗ್ಯಳಾಗಿದ್ದಳು, ಈಗ ನಮ್ಮ ಮಗಳನ್ನು ಮದುವೆಯಾಗಿ, ಖುಷಿಯಾಗಿರು’ ಎನ್ನುತ್ತವೆ. ಈ ‘ಸಮಾಜಪ್ರತಿಷ್ಠೆಯ ಹೆಸರಿನಲ್ಲಿ ಮನುಷ್ಯ ಹೆಣ್ಣಿನ ಅಧಿಕಾರಗಳನ್ನು ಕಸಿದಿದ್ದಾನೆ; ನೀನ್ಯಾಕೆ ಅವಳನ್ನು ಪ್ರೀತಿಸಿದೆ? ನೀನ್ಯಾಕೆ ಅವಳನ್ನು ವಿವಾಹವಾದೆ? ನೀನು ಪ್ರೀತಿಸಲಾರೆ, ಏಕೆಂದರೆ ಸಮಾಜ ಎಂದು ಹೇಳಿಕೊಳ್ಳುವ ಕೆಲವರು, ಇದನ್ನು ಬಯಸುವುದಿಲ್ಲ. ನಾವು ಎಲ್ಲಿಯವರೆಗೆ ನಮ್ಮ ಹೇಡಿತನವನ್ನು ಸಾಮಾಜಿಕ ಪ್ರತಿಷ್ಠೆಯ ಹೆಸರಿನಲ್ಲಿ ಹೊತ್ತುಕೊಂಡಿರುವುದು ಸಾಧ್ಯ?’ ಎನ್ನುತ್ತಾ ನಾನು ಏದುಸಿರು ಬಿಡಲಾರಂಭಿಸಿದ್ದೆ.

ರಿತಿಕ್‌ನ ತಂದೆಯ ಮುಖ ಕಳೆಗುಂದಿತ್ತು. ಅವರ ಬಗ್ಗೆ ನನಗೆ ದುಃಖವಾಯಿತು. ಆದರೆ ನಾನೇನು ತಾನೇ ಮಾಡಲು ಸಾಧ್ಯವಿತ್ತು, ಇದು ಆಗಲೇ ಬೇಕಿತ್ತು; ಯಾವುದೇ ವಿವಾದದಲ್ಲಿ ಒಬ್ಬರಿಗೆ ಗೆಲುವು ಮತ್ತು ಇನ್ನೊಬ್ಬರಿಗೆ ಸೋಲು ಆಗಲೇ ಬೇಕಿತ್ತು. ನಾನು ವಿವಾಹವಾಗಲು ಬಯಸುತ್ತಿರಲಿಲ್ಲ, ರಿತಿಕ್‌ನನ್ನು ಸಹ ಬಿಡಲು ಬಯಸುತ್ತಿರಲಿಲ್ಲ. ನಾನು ರಿತಿಕ್‌ನ ತಂದೆಯನ್ನು ಖುಷಿಪಡಿಸಲು ಈ ಎರಡರಲ್ಲಿ ಒಂದು ರಸ್ತೆಯನ್ನು ಆಯ್ಕೆ ಮಾಡಲೇ ಬೇಕಿತ್ತು.

ಅವರು ಸೋಲನ್ನು ಒಪ್ಪಿಕೊಳ್ಳುತ್ತಾ ಮತ್ತೊಂದು ಬಾಣವನ್ನು ಬಿಟ್ಟರು, ‘ನೋಡು ಸುಗಂಧಾ, ನೀವು ಒಬ್ಬರನ್ನೊಬ್ಬರು ಇಷ್ಟಪಡುತ್ತೀರ, ಜೊತೆಯಲ್ಲಿರಲು ಬಯಸುತ್ತೀರ ಎನ್ನುವುದು ಸರಿಯೇ. ಆದರೆ ನಮಗೆ ಈ ಬಗ್ಗೆ ಯಾವುದೇ ಆಕ್ಷೇಪಣೆಯಿಲ್ಲ. ಆದರೆ ನಿಮ್ಮ ಮಕ್ಕಳಿಗೆ ಅವರ ತಂದೆಯ ಹೆಸರನ್ನು ಏನೆಂದು ಕೊಡುತ್ತೀರ ಎಂಬ ಬಗ್ಗೆ ಯೋಚಿಸಿದ್ದೀರ? ನಮ್ಮ ಸಮಾಜ ಮಗುವನ್ನು ಅದರ ತಂದೆಯ ಹೆಸರಿನಿಂದ ಗುರುತಿಸುತ್ತದೆ, ಅಮ್ಮನ ಹೆಸರಿನಿಂದ ಅಲ್ಲ’.



ಅವರ ಮಾತಿನಲ್ಲಿ ಹುರುಳಿತ್ತು, ಆದರೆ ಮುಳ್ಳು ಅಲ್ಲಿಗೇ ಹೋಗಿ ಸಿಕ್ಕಿಕೊಂಡಿತು. ನಾನು ಮದುವೆಯ ವಿಷಯ ಹೇಳಿ ರಿತಿಕ್‌ನನ್ನು ಕಳೆದುಕೊಳ್ಳಲು ಬಯಸುತ್ತಿರಲಿಲ್ಲ. ನನಗೆ ಮತ್ತು ರಿತಿಕ್ ನಡುವೆ ವಿಚಾರಗಳಲ್ಲಿ ಸಮಾನತೆ ಇದ್ದಾಗ್ಯೂ, ರಿತಿಕ್‌ಗೆ ವಿವಾಹ ಒಪ್ಪಿಗೆ ಇರಲಿಲ್ಲ. ರಿತಿಕ್ ಇಲ್ಲದೆ ಜೀವನ ನನಗೆ ಅರ್ಥಹೀನವೆಂದು ಅನ್ನಿಸುತ್ತಿತ್ತು. ನನ್ನೊಳಗಿನ ಆ ಹೆಣ್ಣು ಮಗುವಿನ ವಿಷಯವನ್ನು ಮೈಗೂಡಿಸಿಕೊಂಡಿದ್ದಳು; ಇದು ನನಗೆ ಆಗ ತಿಳಿದಿರಲಿಲ್ಲ. ಆದರೆ ನನ್ನೊಳಗಿನ ಎರಡನೆಯ ಹೆಣ್ಣು, ಮಗುವಿಗೆ ವಿವಾಹ ಬಂಧನ ಅನವಶ್ಯಕವೆಂದು ತಿಳಿಯುತ್ತಿದ್ದಳು, ಈಗ ಅವಳು ತಲೆ ಕೊಡವಿ, ಸೆಟೆದು ನಿಂತಿದ್ದಳು. ಅವಳು ರಿತಿಕ್ ತಂದೆಯವರ ಎಲ್ಲಾ ತರ್ಕಗಳನ್ನು ತಿರಸ್ಕರಿಸಿದಳು. ನಾವು ಅವರ ವಿಚಾರಗಳನ್ನು ಒಪ್ಪ ಬೇಕಿರಲಿಲ್ಲ, ನಾವು ಒಪ್ಪಲಿಲ್ಲ.

ಆ ರಾತ್ರಿ ತುಂಬಾ ಉದಾಸೀನತೆಯಲ್ಲಿ ಕಳೆಯಿತು. ಬೆಳಿಗ್ಗೆ ರಿತಿಕ್‌ನ ತಂದೆ ಮರಳಿ ಹೋದರು. ರಿತಿಕ್ ಅವರನ್ನು ರೈಲ್ವೆ ಸ್ಟೇಷನ್‌ಗೆ ಬಿಟ್ಟು ಬರಲು ಹೋದ. ನಾನು ಕಚೇರಿಗೆ ಹೋಗುವ ಸಿದ್ಧತೆಯಲ್ಲಿ ತೊಡಗಿದೆ. ಹನ್ನೊಂದು ಗಂಟೆಗೆ ರಿತಿಕ್ ಫೋನ್ ಮಾಡಿ, ‘ನೀನೊಬ್ಬಳೇ ಕಾಲೇಜಿಗೆ ಹೋಗು, ನಾನು ರೈಲ್ವೆ ಸ್ಟೇಷನ್‌ನಿಂದ ನೇರವಾಗಿ ಕಚೇರಿಗೆ ಹೋಗ್ತೀನಿ’ ಎಂದು ತಿಳಿಸಿದ.

‘ಊಟ ಮಾಡಲ್ವ? ನಾನು ಅಡುಗೆ ಮಾಡಿದ್ದೇನೆ’ ನಾನು ಕೇಳಿದೆ.

‘ಬೇಡ, ಲೇಟಾಗುತ್ತೆ. ರೈಲು ತಡವಾಗಿ ಬಂತು, ಹೀಗಾಗಿ ತಡವಾಯಿತು. ಮನೆಗೆ ಬಂದರೆ ಕಚೇರಿಗೆ ಹೋಗಲು ಲೇಟಾಗುತ್ತೆ. ನೀನು ಊಟ ಮಾಡಿ ಹೋಗು’ ಎಂದ ರಿತಿಕ್.

‘ಸರಿ’ ಎಂದು ನಾನು ನನ್ನ ಊಟದ ಬಾಕ್ಸ್ ಪ್ಯಾಕ್ ಮಾಡಿಕೊಂಡೆ. ಊಟ ಮಾಡುವ ಇಚ್ಛೆ ಇರಲಿಲ್ಲ. ಊಟದ ಬಿಡುವಿನಲ್ಲಿ ಎಲ್ಲರೊಂದಿಗೆ ಕೂತು ಸ್ವಲ್ಪ ತಿನ್ನುವೆನೆಂದು ಯೋಚಿಸಿದೆ. ರಿತಿಕ್‌ನ ತಂದೆ ಮತ್ತೆ ರಿತಿಕ್‌ಗೆ ತಿಳಿವಳಿಕೆ ಹೇಳಿರಬೇಕು. ಏನಂತ ಹೇಳಿರಬಹುದು? ಅವಳನ್ನು ಮದುವೆಯಾಗು ಅಥವಾ ಬಿಟ್ಟು ಬಿಡು ಎಂದಿರಬೇಕಲ್ಲವೇ? ರಿತಿಕ್ ಈ ಬಗ್ಗೆ ಯೋಚಿಸಲು ಆರಂಭಿಸಿರಬೇಕು? ಅವನು ತನ್ನ ತಂದೆಯ ಮಾತಿನ ಬಗ್ಗೆ ಯೋಚನೆ ಮಾಡುತ್ತಿರಬೇಕು? ನನ್ನ ತಲೆ ಭಾರವಾಗಿತ್ತು.

‘ಹಲೋ ಸುಗಂಧಾ’ ಕಚೇರಿಗೆ ಹೋಗುತ್ತಲೇ ಕೀರ್ತಿ ಕರೆದಳು. ಅವಳು ಇಂದು ಸಮಯಕ್ಕೆ ಸರಿಯಾಗಿ ಕಚೇರಿಗೆ ಬಂದಿದ್ದಳು. ಇದು ಆಶ್ಚರ್ಯದ ಸಂಗತಿಯಾಗಿತ್ತು.

‘ಓಹ್! ಇವತ್ತು ನೀನು ಬೇಗ?’ ಕೀರ್ತಿಯನ್ನು ಕೇಳಿದೆ.

‘ಅರೇ, ಇವತ್ತು ನಾನು ಸಾಮಾನು ಕೊಳ್ಳಲು ಕ್ಯಾಂಟೀನ್‌ಗೆ ಹೋಗಬೇಕಿತ್ತು, ಹೋಗಿದ್ದೆ, ಆದರೆ ಅಲ್ಲಿಗೆ ಹೋದಾಗ ಯಾವುದೋ ಕಾರಣಕ್ಕೆ ಕ್ಯಾಂಟೀನ್ ಮುಚ್ಚಿರುವುದು ತಿಳಿಯಿತು’ ಎಂದಳು ಕೀರ್ತಿ.

ನನ್ನ ಕಚೇರಿಯ ಎಪ್ಪತ್ತು ಪರ್ಸೆಂಟ್ ಸಿಬ್ಬಂದಿ ಆರ್ಮಿ ಕ್ಯಾಂಟೀನ್‌ನಿಂದ ಸಾಮಾನುಗಳನ್ನು ಕೊಳ್ಳುತ್ತಾರೆ. ಇದಕ್ಕಾಗಿ ಅವರು ಆರ್ಮಿಯಲ್ಲಿ ಕೆಲಸ ಮಾಡುವವರನ್ನು ‘ಬಲೆ’ಗೆ ಹಾಕಿಕೊಂಡಿರುತ್ತಾರೆ. ಆರ್ಮಿ ಕ್ಯಾಂಟೀನ್‌ನಲ್ಲಿ ಹೊರಗಿನ ಅಂಗಡಿಗಳಿಗಿಂತ ಕಡಿಮೆ ಬೆಲೆಗೆ ಸಾಮಾನುಗಳು ಸಿಗುತ್ತಿತ್ತು. ಈ ದುರಾಸೆಯಿಂದಾಗಿ ಅವರು ಆರ್ಮಿಯವರನ್ನು ಪ್ರಶಂಸಿಸುತ್ತಿದ್ದರು. ಅವರು ಒಂದು ಅಥವಾ ಎರಡು ಸಾಬೂನು ಖರೀದಿಸುವ ಜಾಗದಲ್ಲಿ ಹತ್ತತ್ತು ಸಾಬೂನುಗಳನ್ನು ಕೊಳ್ಳುತ್ತಿದ್ದರು, ಇದು ಅನವಶ್ಯಕ ಖರ್ಚಲ್ಲದೆ ಮತ್ತೇನು? ಹೀಗಿರುವಾಗ ಅಗ್ಗದಲ್ಲಿ ಸಾಮಾನುಗಳನ್ನು ಕೊಂಡು ಲಾಭ ಎಲ್ಲಿ ಬಂತು? ಅಗ್ಗದಲ್ಲಿ ಸಿಗುತ್ತದೆ ಎಂದು ಅನವಶ್ಯಕವಾಗಿ ವೆಚ್ಚ ಮಾಡಿದರೆ, ಉಳಿತಾಯ ಎಲ್ಲಿ ಬಂತು? ಇದಕ್ಕೆ ಬೆಣ್ಣೆಯಂಥ ಮಾತು ಬೇರೆ, ಇದನ್ನೆಲ್ಲಾ ನೋಡಿದಾಗ ನಾನು ರೇಗುತ್ತೇನೆ. ಆರ್ಮಿಯವರ ಬಳಿ ಹೋಗುವ ಶಕ್ತಿ ಇಲ್ಲದವರು ಕೀರ್ತಿಯ ಮೊರೆ ಹೋಗುತ್ತಿದ್ದರು. ಕೀರ್ತಿಯ ಬಳಿಗೆ ಬಂದು, ನಮಗೆ ಕ್ಯಾಂಟೀನ್‌ನಿಂದ ಟೇಬಲ್‌ಫ್ಯಾನ್ ಕೊಡಿಸಿ, ಚ್ಯವನಪ್ರಾಶ ಕೊಡಿಸಿ, ಕ್ರೀಮ್ ಪೌಡರ್ ಕೊಡಿಸಿ, ಉಪ್ಪಿನಕಾಯಿ ಚಟ್ನಿ ಪುಡಿ ಕೊಡಿಸಿ ಎಂದು ಕೇಳಿಕೊಳ್ಳುತ್ತಿದ್ದರು.

ಕೀರ್ತಿ ನನಗೂ ಸಹ ಅನೇಕ ಬಾರಿ ಎಣ್ಣೆ, ಸೋಪು ಇತ್ಯಾದಿಗಳನ್ನು ಕೊಳ್ಳಲು ತನ್ನ ಜೊತೆಗೆ ಬರುವಂತೆ ಹೇಳುತ್ತಿದ್ದಳು. ಆದರೆ ನಾನು ಪ್ರತಿಬಾರಿಯೂ ಅಲ್ಲಗಳೆಯುತ್ತಿದ್ದೆ. ನನಗೆ ಇಂಥ ಭಟ್ಟಂಗಿತನ ಹಿಡಿಸುತ್ತಿರಲಿಲ್ಲ.

ನಾನು ಆದರ್ಶವಾದಿಯಲ್ಲ, ಉದ್ಯೋಗ ಕಂಪನಿಯೊಂದು ತನ್ನ ಉತ್ಪಾದನೆಯ ಮೇಲೆ ಕಡಿತ ಅಥವಾ ಒಂದಕ್ಕೆ ಒಂದು ಪುಕ್ಕಟೆ ವಸ್ತುಗಳನ್ನು ಕೊಟ್ಟರೆ ನನಗೆ ಇಷ್ಟವಾಗುತ್ತದೆ. ನಾನು ಅಂಗಡಿಯಲ್ಲಿ ಚಹಾ ಪುಡಿ ಅಥವಾ ಸೋಪು ಖರೀದಿಸುವಾಗ, ಏನಾದರು ಆಫರ್ ಇದೆಯೇ ಎಂದು ಖಂಡಿತ ಕೇಳುತ್ತೇನೆ. ಇದು ನನ್ನ ಹಕ್ಕು ಎಂದು ನನಗೆ ಅನ್ನಿಸುತ್ತದೆ. ಹೋಗಲಿ, ಇದು ಅವರವರ ಯೋಚನೆಗಳು. ಯಾರಿಗೆ ಯಾವುದು ಹಿತವೆಂದು ಕಾಣುವುದೋ, ಅದನ್ನು ಅವರು ಮಾಡಬೇಕು.

‘ಇವತ್ತೇಕೆ ನಿನ್ನ ಮುಖ ಬಾಡಿದೆ? ರಾತ್ರಿ ನಿದ್ರೆ ಬರಲಿಲ್ವಾ?’ ಕೀರ್ತಿ ಕೇಳಿದಳು.

‘ಹೌದು, ಇವತ್ತು ಸರಿಯಾಗಿ ನಿದ್ರೆ ಬರಲಿಲ್ಲ’

‘ಏಕೆ? ರಿತಿಕ್ ನಿದ್ರೆ ಮಾಡಲು ಬಿಡಲಿಲ್ವ?’ ಕೀರ್ತಿ ನನ್ನನ್ನು ಛೇಡಿಸಿದಳು.

‘ಹಾಗಲ್ಲ’

‘ಮತ್ತೇನು ವಿಷಯ? ಹೇಳು, ನಾನೂ ಕೇಳ್ತೀನಿ! ಹೀಗೆ ಜೊತೆಯಲ್ಲಿರುವುದರಿಂದ ಮಜ ಅನ್ನಿಸುತ್ತಿರಬೇಕು? ಯಾವುದೇ ಟೆನ್ಷನ್ ಇಲ್ಲ, ಯಾವುದೇ ಭಯವಿಲ್ಲ! ರಿತಿಕ್ ಸ್ವಲ್ಪ ರೇಗಿದ ಧ್ವನಿಯಲ್ಲಿ ಏನಾದ್ರು ಹೇಳಿದರೂ, ನೀನು ಅವನನ್ನು ತ್ಯಜಿಸುವುದಾಗಿ ಬೆದರಿಸಬಲ್ಲೆ, ಹೆಂಡ್ತಿಯಾಗಿದ್ದರೆ